ನಿವಾರಣೋಪಾಯಗಳನ್ನು ಕಂಡು ಹಿಡಿಯಲು ರೂ.100 ಲಕ್ಷಗಳನ್ನು ಕೃಷಿ ವಿಶ್ವವಿದ್ಯಾನಿಲಯ, ಧಾರವಾಡರವರಿಗೆ ಮಂಜೂರು ಮಾಡಲಾಗಿದೆ.

ಕೃತೋಇ 14 ಕೃತೋಸ 2009

ತೋಟಗಾರಿಕೆ ಮತ್ತು ಬಂದಿಖಾನೆ ಸಚಿವರು

ಜಾ:

ಕರ್ನಾಟಕ ವಿಧಾನ ಸಭೆ

98 ಶ್ರೀ ಜಯಚಂದ್ರ ಟಿ.ಬಿ.

ಮಾನ್ಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು

ಅ) ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಲ್ಲಿ ಪಡಿತರ ಅಂಗಡಿಗಳಿಗೆ ಸೀಮೆಎಣ್ಣೆಯನ್ನು ವಿತರಿಸುವ ವಿತರಕರು ಸ್ಥಳೀಯರಾಗಿರುವುದರಿಂದ ಪದೇ ಪದೇ ಲೋಪದೋಷವಾಗುತ್ತಿದ್ದು, ಈ ಬಗ್ಗೆ ಸಾರ್ವಜನಿಕರು ಸರ್ಕಾರದ ಗಮನಕ್ಕೆ ತಂದಿದ್ದರ ಮೇಲೆ ಸದರಿ ವಿತರಕರ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು;

ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಲ್ಲಿ ಪಡಿತರ ನ್ಯಾಯಬೆಲೆ ಅಂಗಡಿಗಳಿಗೆ ಸೀಮೆಎಣ್ಣೆಯನ್ನು ವಿತರಣೆ ಮಾಡುತ್ತಿದ್ದ ಮೆ: ಚಂದ್ರಶೇಖರ್ ಎಂಟರ್ ಪ್ರೈಸಸ್, ಸಗಟು ಸೀಮೆಎಣ್ಣೆ ವಿತರಕರು, ನ್ಯಾಯಬೆಲೆ ಅಂಗಡಿಗಳಿಗೆ ಸೀಮೆಎಣ್ಣೆ ವಿತರಣೆಯಲ್ಲಿ ನ್ಯೂನತೆಗಳು ಎಸಗಿರುವುದು ಕಂಡುಬಂದಿದ್ದರಿಂದ ಸದರಿ ಸಗಟು ವಿತರಕರ ಪ್ರಾದೀಕರಣವನ್ನು ಅಮಾನತ್ತು ಪಡಿಸಲಾಗಿದೆ ಹಾಗೂ ತಾಲ್ಲೂಕಿನ ಕಾರ್ಡುದಾರರ ಹಿತದೃಷ್ಟಿಯಿಂದ ಸೀಮೆಎಣ್ಣೆಯ ಸಗಟು ವಿತರಣೆಯನ್ನು ಮೆ॥ ಅಣೇಕಾರ್ ಬ್ರದರ್ಸ್ ಮತ್ತು ಕಂಪನಿ, ತುಮಕೂರುರವರಿಗೆ ವಹಿಸಿ ತಾತ್ಕಾಲಿಕವಾಗಿ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ.

ಆ) ಇದರಿಂದಾಗಿ ಶಾಶ್ವತವಾಗಿ ಬೇರೆ ವಿತರಕರನ್ನು ನೇಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಸೀಮೆಎಣ್ಣೆ ಸಗಟು ವಿತರಕರ ಪ್ರಾಧಿಕರಣವನ್ನು ಅಮಾನತ್ತುಪಡಿಸಲಾಗಿದೆ ಹಾಗೂ ಪ್ರಕರಣವನ್ನು ಮಾನ್ಯ ಜಿಲ್ಲಾಧಿಕಾರಿಗಳವರ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸಿ, ನ್ಯಾಯಾಲಯದ ತೀರ್ಮಾನದಂತೆ ಕ್ರಮ ಕೈಗೊಳ್ಳಲಾಗುವುದು.

ಆನಾಸ 36 ಡಿಆರ್‌ಎ 2009

(ಹೆಚ್.ಹಾಲಪ್ಪ)
ಆಹಾರ ಮತ್ತು ನಾಗರಿಕ ಸರಬರಾಜು
ಮತ್ತು ಗ್ರಾಹಕ ವ್ಯವಹಾರಗಳ ಸಚಿವರು